ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/47/ನಿಮ್ಹಾನ್ಸ್-ತರಬೇತಿ/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ: 08.10.2021

# ಸುತ್ತೋಲೆ

ವಿಷಯ: "ಜೀವನ ಕೌಶಲ್ಯ ತರಬೇತಿ"ಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಎನ್.ಎಸ್.ಎಸ್ ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/ನಿಮ್ಹಾನ್ಸ್/33/ 2021-22/199 ದಿನಾಂಕ:02.09.2021

* * * * *

2021-22ನೇ ಸಾಲಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ, ರಾಜ್ಯ ಘಟಕ ಹಾಗೂ ನಿಮ್ಹಾನ್ಸ್ ಸಹಯೋಗದೊಂದಿಗೆ ಎನ್.ಎಸ್.ಎಸ್. ಯೋಜನಾಧಿಕಾರಿಗಳ ಮೂಲಕ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ "ಜೀವನ ಕೌಶಲ್ಯ" ತರಬೇತಿಯನ್ನು ದಿನಾಂಕ: 25.10.2021 ರಿಂದ 30.10.2021 ರವರೆಗೆ ಆಯೋಜಿಸಲಾಗಿರುತ್ತದೆ. ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಕನಿಷ್ಠ ಒಬ್ಬರು ಅಧ್ಯಾಪಕರಾದರೂ ಈ ತರಬೇತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

ಆದ್ದರಿಂದ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸದರಿ ತರಬೇತಿ ಪಡೆಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ತಲಾ ಒಬ್ಬರು ಅಧ್ಯಾಪಕರನ್ನು ನಿಯೋಜಿಸಲು ಅನುಕೂಲವಾಗುವಂತೆ ಅಧ್ಯಾಪಕರ ಹೆಸರು, ಪದನಾಮ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ ಇವುಗಳನ್ನು ಪ್ರಾಂಶುಪಾಲರ ಅನುಮೋದನೆಯೊಂದಿಗೆ ದಿನಾಂಕ:13.10.2021ರಂದು ಮಧ್ಯಾಹ್ನ 2:00 ಗಂಟೆಯೊಳಗಾಗಿ ಈ ಕಛೇರಿಯ ಇ-ಮೇಲ್ ವಿಳಾಸ: **dcekar.sports@gmail.com** ಗೆ ಕಡ್ಡಾಯವಾಗಿ ಕಳುಹಿಸುವಂತೆ ಸೂಚಿಸಲಾಗಿದೆ.

*ಕೋವಿಡ್ ಪರಿಸ್ಥಿತಿಗನುಗುಣವಾಗಿ ಕಾರ್ಯಕ್ರಮಗಳ ಬದಲಾವಣೆಗೆ ಒಳಪಟ್ಟಿರುತ್ತದೆ,

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ

1. ರಾಜ್ಯದ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಾಹಿತಿಗಾಗಿ
2. ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಅಯುಕ್ತರ ಕಛೇರಿ, ಬೆಂಗಳೂರು.
4. ಶ್ರೀ ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಅಯುಕ್ತರ ಕಛೇರಿ, ಬೆಂಗಳೂರು.
5. ಶ್ರೀ ಶ್ರೀನಿವಾಸ ಜಿ, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಅಯುಕ್ತರ ಕಛೇರಿ, ಬೆಂಗಳೂರು.